ದಿನಾಂಕಃ 28-01-2020 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ- ಪ್ರತಿವಾದಿ 1 ರ ಪರ ಶ್ರೀ ಪಿಆರಎಂ ವಕೀಲರಿಂದ

ನಾನು ಎಸ್‌ಎಸ್‌ಎಲ್‌ಸಿ ವರೆಗೆ ವಿದ್ಯಾಭ್ಯಾಸ ಮಾಡಿರುವೆನು. ನನ್ನ ಗಂಡನ ಊರು ಕುಂದಗೋಳ ತಾಲೂಕನ ತರಲಘಟ್ಟ ಗ್ರಾಮ. ನನ್ನ ಹೆಸರಿನಲ್ಲಿ ರಿ ಸ ನಂ. 64/2 ಎ ಪಾಣಿಗಟ್ಟಿ ಗ್ರಾಮದಲ್ಲಿ ಜಮೀನು ಇರುವುದು. ಅದರ ವಿಸ್ತೀರ್ಣ 3 ಎಕರೆ ಜಮೀನು ಇರುವುದು. ಈ ಜಮೀನನ್ನು 2017 ರಲ್ಲಿ ಖರೀದಿ ಮಾಡಿರುವೆವು. ಪಾಣಿಗಟ್ಟಿ ಗ್ರಾಮ ಮತ್ತು ತರಲಘಟ್ಟ ಗ್ರಾಮಗಳ ಮದ್ಯೆ ಸುಮಾರು 6 ಕಿ.ಮೀ.ಗಳ ಅಂತರ ಇರುವುದು. ಪ್ರತಿವಾದಿ 1 ಮತ್ತು 2 ರವರು ಸುಮಾರು 8-10 ವರುಷಗಳಿಂದಲೂ ಪರಿಚಯ ಇರುವರು.

ದಾವಾ ಆಸ್ತಿಯು ಪ್ರತಿವಾದಿ 1 ಮತ್ತು 2 ರವರ ಹೆಸರಿನಲ್ಲಿ ಜಂಟಿಯಾಗಿ ಇತ್ತು. ಇವರ ಮದ್ಯೆ ಈ ಜಮೀನಲ್ಲಿ ಹಿಸ್ಸೆ ಆಗಿರುವುದಿಲ್ಲ ಅಂದರೆ ಸರಿಯಲ್ಲ. ದಿಃ 03.04.2014 ರಂದು 1 ನೇ ಪ್ರತಿವಾದಿಯ ಮನೆಯಲ್ಲಿ ಮಾತುಕತೆ ಆಗಿರುವುದು. ಪಾಣಿಗಟ್ಟಿ ಗ್ರಾಮವು ಶಿಗ್ಗಾಂವ ವ್ಯಾಪ್ತಿಯಲ್ಲಿ ಬರುವುದು. ಈ ಮಾತುಕತೆಯ ಸಮಯದಲ್ಲಿ ಬಿ.ವೈ ಮಲರಡ್ಡಿ ಎಸ್.ವಿ ಬಾಳಿಗೌಡರ, ರುದ್ರಗೌಡ ಶೀಲವಂತ, ಎನ.ಎನ. ಶೇರೆವಾಡ, ಪ್ರತಿವಾದಿ 1 ಮತ್ತು ಪ್ರತಿವಾದಿ 2, ಪ್ರತಿವಾದಿ 3 ಮತ್ತು ಮಂಜುಳಾ ಯಲ್ಲಪ್ಪ ವಾಲೀಕಾರ ಮತ್ತು ನಾನು ಹಾಜರು ಇದ್ದೆವು. ಆಗ ಸಮಯ ಸಂಜೆ 4.00 ಗಂಟೆ ಆಗಿತ್ತು. ಆ ದಿನ ಮಾತುಕತೆಯು 1 ಗಂಟೆಯ ಸಮಯ ತೆಗೆದುಕೊಂಡಿರುವದು. ಆ ಮಾತುಕತೆ ಮುಗಿದಾಗ ಸಮಯ ಸಾಯಂಕಾಲ 5.00 ಗಂಟೆ ಆಗಿತ್ತು. ಪ್ರತಿವಾದಿ 1 ಮತ್ತು 2 ರವರು ಜಮೀನಿನ ಮಾರುಕಟ್ಟೆ ಬೆಲೆ 8,21,000-00 ರೂಪಾಯಿ ಅಂತಾ ಹೇಳಿರುವರು. ಆ ದಿನ ದಾವಾ ಜಮೀನಿನ ಪಹಣಿ ಪತ್ರಿಕೆಯನ್ನು ತೆಗೆದುಕೊಂಡು ಬಂದಿದ್ದರು. ಅದನ್ನು ನಾನು ನೋಡಿರುವೆನು. ಈ ಪ್ರತಿವಾದಿ 1 ಮತ್ತು 2 ರವರ ಹೆಸರಿನಲ್ಲಿ 8 ಎಕರೆ 10 ಗುಂಟೆ ಜಮೀನ ಇತ್ತು. ಈ ಒಟ್ಟು

ಜಮೀನಿನಲ್ಲಿ 2 ಎಕರೆ ಜಮೀನನ್ನು ಪಕ್ಕೀರಪ್ಪ ಆವುಜಿ ಎಂಬುವರಿಗೆ ಮಾರಾಟ ಮಾಡಿರುವರು. 1 ಗುಂಟೆ ಜಮೀನು ಪೋಟ ಕರಾಬು ಇರುವುದು. 1 ನೇ ಪ್ರತಿವಾದಿಯ ಹೆಸರಿನಲ್ಲಿ 3 ಎಕರೆ 5 ಗುಂಟೆ ಜಮೀನು ಹಾಗೂ 2 ನೇ ಪ್ರತಿವಾದಿಯ ಹೆಸರಿನಲ್ಲಿ 3 ಎಕರೆ 4 ಗುಂಟೆ ಜಮೀನು ಇತ್ತು. ಪ್ರತಿವಾದಿ 1 ಮತ್ತು 2 ರವರು ಕೂಡಿಕೊಂಡು 3 ಎಕರೆ 5 ಗುಂಟೆಯ ಪಶ್ಚಿಮ ಭಾಗದ ಜಮೀನನ್ನು ಮಾರಾಟ ಮಾಡುವುದಾಗಿ ಎಂದು ಹೇಳಿರುವರು. ಈ ಛಾಪಾಕಾಗದಗಳನ್ನು ಪ್ರತಿವಾದಿ 1 ಮತ್ತು 2 ರವರು ರೂ. 2000 ಮುಖಬೆಲೆಯ 1 ಹಾಗೂ 600 ರೂ. ಮುಖಬೆಲೆಯ 1 ಛಾಪಾಕಾಗದವನ್ನು ತಂದಿದ್ದರು. ಈ ಛಾಪಾಕಾಗದಗಳನ್ನು ಮಾತುಕತೆಯ ನಂತರ ಶಿಗ್ಗಾಂವದಲ್ಲಿ ಖರೀದಿ ಮಾಡಿರುವರು. ಈ ಛಾಪಾಕಾಗದಗಳನ್ನು ತರಲು ಪ್ರತಿವಾದಿ 1 ಮತ್ತು 2 ರವರು ಹೋದರು. ಛಾಪಾಕಾಗದಗಳನ್ನು ತೆಗೆದುಕೊಂಡು ಸಂಜೆ 4.00 ಗಂಟೆಗೆ ಬಂದಿರುವರು. ಈ ದಾಖಲೆಯನ್ನು ಬರೆಯಲು ಮಾಹಿತಿಯನ್ನು ಪ್ರತಿವಾದಿ 1 ಮತ್ತು 2 ರವರು ಶಿಗ್ಗಾಂವದ ಶ್ರೀ ವಿ.ಎಂ ಪೂಜಾರ ಎಂಬುವರಿಗೆ ಮಾಹಿತಿ ನೀಡಿರುವರು. ಆಗ ಸಮಯ ಸಂಜೆ 4.00 ಗಂಟೆ ಆಗಿತ್ತು. ಶ್ರೀ ವಿ.ಎಂ ಪೂಜಾರ ಎಂಬುವರ ಕಚೇರಿಯಲ್ಲಿ ಸುಮಾರು 1 ಗಂಟೆಗಳ ಸಮಯದ ಅವಕಾಶದವರೆಗೆ ಆಗಿರುವುದು. ಆ ಮಾತುಕತೆಯ ಪ್ರಕಾರ 1 ಎಕರೆ ಜಮೀನಿನ ಮಾರುಕಟ್ಟೆ ಬೆಲೆ 8,21,000-00 ರೂಪಾಯಿ ಅಂತಾ ನಿಗದಿಪಡಿಸಿ ಒಟ್ಟು 25,65,625-00 ರೂಪಾಯಿಗಳಿಗೆ 3 ಎಕರೆ 5 ಗುಂಟೆ ಜಮೀನು ಮಾರಾಟ ಮಾಡಲು ಒಪ್ಪಿಕೊಂಡಿರುವರು. ಅದರಂತೆ ಮುಂಗಡವಾಗಿ ಅದೇ ದಿನ ರೂ. 10,00,000-00 ರೂಪಾಯಿ ಹಣವನ್ನು ಪ್ರತಿವಾದಿ 1 ಮತ್ತು 2 ರವರಿಗೆ ನೀಡಿರುವೆವು. 1000 ರೂ. ಮುಖಬೆಲೆಯ 10 ನೋಟಿನ ಕಂತುಗಳನ್ನು ನೀಡಿರುವೆವು. ಈ ಹಣವನ್ನು ಶಿಗ್ಗಾಂವದಲ್ಲಿ ನೀಡಿರುವೆವು. ನಗದುರೂಪದಲ್ಲಿ ನೀಡಿರುವೆವು. ಈ ಹಣವನ್ನು ನನ್ನ ತಂದೆ ತಾಯಿಗಳ

ಆಸ್ತಿ ಮಾರಾಟ ಮಾಡಿ ಬಂದಂತಹ ದುಡ್ಡನ್ನು ನೀಡಿರುವೆವು.

ಗದಗದಲ್ಲಿ ಇರತಕ್ಕಂತಹ ರಿ ಸ ನಂ. 625 ರ ಜಮೀನನ್ನು 2011 ರಲ್ಲಿ ಮಾರಾಟ ಮಾಡಿದ್ದು ಅದರಿಂದ ಹಣ ಬಂದಿರುವುದು. ಆ ಜಮೀನನ್ನು ಮಾರಾಟ ಮಾಡಿರುವುದರಿಂದ 2 ಲಕ್ಷ ರೂ.ಹಣ ಬಂದಿರುವುದು. ಈ ಹಣದಿಂದ ಗದಗದಲ್ಲಿ ಬೇರೆ ಜಮೀನನ್ನು ಖರೀದಿ ಮಾಡಿರುವೆವು. ಸಾಕ್ಷಿ ಪುನಃ ನುಡಿಯುವುದೆನೆಂದರೆ ಅರುಣ ವೇರ್ಣೇಕರ ಎಂಬುವರಿಗೆ 3 ಎಕರೆ 27 ಗುಂಟೆಯ ಜಮೀನು ಮಾರಾಟ ಮಾಡಿದ್ದು, ಅವರು 1 ಎಕರೆಗೆ 2 ಲಕ್ಷ ರೂ.ದಂತೆ ಒಟ್ಟು 10,00,000-00 ರೂಪಾಯಿ ಹಣ ನಮಗೆ ನೀಡಿರುವರು. ವೇರ್ಣೇಕರ ಎಂಬುವರಿಗೆ ಜಮೀನು ಮಾರಾಟ ಮಾಡಿರುವ ಬಗ್ಗೆ ದಾಖಲಾತಿ ಇರುವುದು. ನಾವು ಪ್ರತಿವಾದಿ 1 ಮತ್ತು 2 ರವರ ಜೊತೆ ಮಾತುಕತೆಯಾದ ನಂತರ ಅರಣು ವೇರ್ಣೇಕರ ಎಂಬುವರ ಕಡೆಯಿಂದ 10,00,000-00 ರೂಪಾಯಿ ಹಣವನ್ನು ಪಡೆದುಕೊಂಡು ಬಂದು ನೀಡಿರುವೆವು. ಆ ಮಾರಾಟ ಮಾಡಿರುವ ಜಮೀನಿನ ಖರೀದಿಪತ್ರವನ್ನು ಹಾಜರುಪಡಿಸುತ್ತೇನೆ ನಾನು ಅರುಣ ವೇರ್ಣೇಕರ ಎಂಬುವರಿಗೆ ಯಾವುದೇ ಜಮೀನನ್ನು ಮಾರಾಟ ಮಾಡಿರುವುದಿಲ್ಲ ಹಾಗೂ ಕಡೆಯಿಂದ 10,00,000-00 ರೂಪಾಯಿ ಹಣವನ್ನು ಪಡೆದುಕೊಂಡಿರುವುದಿಲ್ಲ ಹಾಗೂ ಆ ಹಣವನ್ನು ಪ್ರತಿವಾದಿ 1 ಮತ್ತು 2 ರವರಿಗೆ ನೀಡಿರುವುದಿಲ್ಲ ಅಂದರೆ ಸರಿಯಲ್ಲ.

ಮುಂದಿನ ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.